## ದಿನಾಂಕ : 06.02.2021 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್-80 ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಾರ್ಡ್ ಸಂಖ್ಯೆ-80 ಹೊಯ್ಸಳನಗರ ವಾರ್ಡ್ ಕಛೇರಿಯಲ್ಲಿ ದಿನಾಂಕ 06.02.2021 ರಂದು ಬೆಳಗ್ಗೆ 11.00 ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನಿಯೋಜಿಸಿರುವ ವಾರ್ಡ್‌ನ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ.

**ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು**

1. ಶ್ರೀ.ಎಂ.ಲೋಕೇಶ್ – ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್-80
2. ಶ್ರೀ.ಲಿಂಗರಾಜೇಗೌಡ –ಸಹಾಯಕ ಅಭಿಯಂತರರು (ಸದಸ್ಯ ಕಾರ್ಯದರ್ಶಿ)
3. ಶ್ರೀಮತಿ.ಚಿತ್ರಾ – ಹಿರಿಯ ಆರೋಗ್ಯ ನೀರಿಕ್ಷಕರು
4. ಶ್ರೀ.ಗೌತಮ್ – ಸಹಾಯಕ ಅಭಿಯಂತರರು (ಬೆಸ್ಕಾಂ)
5. ಶ್ರೀ.ತಿಮ್ಮಪ್ಪ – ಅರಣ್ಯ ಇಲಾಖೆ
6. ಶ್ರೀ.ಹೆಗಡೆ – ಬಿಡಬ್ಲ್ಯೂಎಸೆಸ್‌ಬಿ, ಎಇಇ (ಯುಎಫ್‌ಡಬ್ಲ್ಯೂ)
7. ಶ್ರೀ.ನಾಯಕ್ – ಸಹಾಯಕ ಅಭಿಯಂತರರು (ಬಿಡಿಎ)
8. ಶ್ರೀ.ಶಿವೇಗೌಡ – ಆರೋಗ್ಯ ವೈದ್ಯಾಧಿಕಾರಿಗಳು (ಸಿ.ವಿ.ರಾಮನ್‌ನಗರ ವಲಯ)
9. ಶ್ರೀಮತಿ. ಸ್ನೇಹಾ ನಂದಿಹಾಳ –ಸದಸ್ಯರು
10. ಶ್ರೀ.ಲೋಕೇಶ್ – ಸದಸ್ಯರು
11. ಶ್ರೀ.ಆನಂದ್ – ಸದಸ್ಯರು
12. ಶ್ರೀ.ರಮೇಶ್ – ಸದಸ್ಯರು
13. ಶ್ರೀ.ವೇಣು.ಪಿ.ಎನ್ – ಸದಸ್ಯರು
14. ಶ್ರೀ.ವೆಂಕಟೇಶ್ – ಸದಸ್ಯರು
15. ಶ್ರೀ.ಅಶೋಕ ಶರತ್ – ಸದಸ್ಯರು
16. ಶ್ರೀ.ಬಾಬುಕುಮಾರ್ – ಸದಸ್ಯರು
17. ಶ್ರೀ.ಕಾರ್ಮೇಗಂ – ಸದಸ್ಯರು

ಪ್ರಥಮವಾಗಿ ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ಆದ ಶ್ರೀ.ಸಿ.ಲಿಂಗರಾಜೇಗೌಡರವರು ಸಭೆಗೆ ಆಗಮಸಿದ್ದ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ಹಾಗೂ ಹಿಂದಿನ ಸಭೆಯ ನಡವಳಿಗಳನ್ನು ಸಭೆಗೆ ಓದಿ ತಿಳಿಸಿದರು ಹಾಗೂ ಇಂದಿನ ಸಭೆಯ ಅಜೆಂಡಾ ಹಾಗೂ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಸಭೆಗೆ ಮಾಹಿತಿ ನೀಡುವಂತೆ ಕೋರಿದರು. ಹಾಗೂ ವಾರ್ಡ್ ಸಮತಿಗೆ ಆಯ್ಕೆ ಮಾಡಲಾಗಿರುವ ಸದಸ್ಯರುಗಳ ಪಟ್ಟಿಯನ್ನು ಸಭೆಗೆ ತಿಳಿಸಿದರು.

- ಸಭೆಯಲ್ಲಿ ಹಾಜರಿದ್ದ ಶ್ರೀಮತಿ. ಸ್ನೇಹಾ ನಂದಿಹಾಳರವರು ಮಾತನಾಡುತ್ತಾ, ಕಳೆದ ಸಭೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಲಿಂಗರಾಜೇಗೌಡ ಉಲ್ಲೇಖಿಸಿದ ಬಜೆಟ್ ಅಂಕಿ ಅಂಶಗಳಿಂದ, 15 ಕೋಟಿಗಳ ವಿಶೇಷ ಅನುದಾನವನ್ನು ಸ್ಥಗಿತಗೊಳಿಸಲಾಗಿದೆ. ಡಿಫ್ರೀಜ್ ಮಾಡುವ ಬಗ್ಗೆ ಕೇಳಿದಾಗ, ಈ ಸಂಬಂಧ ಕಡತವನ್ನು ಸಮುಚಿತ ಮಾರ್ಗದಲ್ಲಿ ಡೀ-ಫ್ರೀಜ್‌ಗಾಗಿ ಸಲ್ಲಿಸಲಾಗಿದೆ ಎಂದು ತಿಳಿಸಲಾಯಿತು.
- ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ.ಲಿಂಗರಾಜೇಗೌಡ ಇನ್ನೂ ವಿವಿಧ ಬಜೆಟ್ ಅಡಿಯಲ್ಲಿ ಕೈಗೊಳ್ಳಬೇಕಾದ ಕೃತಿಗಳ ಪಟ್ಟಿಯನ್ನು ಒದಗಿಸುವ ಬಗ್ಗೆ ಕೋರಿದ್ದು, ದಿನಾಂಕ : 08.02.2021 ರಂದು ವಿವರ ನೀಡಲಾಗುವುದು ಎಂದು ಸಹಾಯಕ ಅಭಿಯಂತರರು ತಿಳಿಸಿದರು.
- ನಗರೋತ್ಥಾನ ನೇತೃತ್ವದ ಕೆಲಸಗಳು ಮುಂದಿನ 1-6 ತಿಂಗಳಲ್ಲಿ ಪೂರ್ಣಗೊಳ್ಳಲಿವೆ. ಚರಂಡಿಗಳ ಡಿ-ಸಿಲ್ಟಿಂಗ್ ಈ ಕೃತಿಗಳ ಒಂದು ಭಾಗವಾಗಿದೆ.
- ವಾರ್ಡ್ ವ್ಯಾಪ್ತಿಯಲ್ಲಿನ ಸಿಎ ಸೈಟ್ 151, 152 & 153 ರ ಬಗ್ಗೆ ಮಾಹಿತಿಯನ್ನು ಕೋರಿದ್ದು, ಈ ಬಗ್ಗೆ ಬಿಡಿಎ ಸಹಾಯಕ ಅಭಿಯಂತರರಾದ ಶ್ರೀ.ನಾಯಕ್‌ರವರು ಅಗತ್ಯ ಮಾಹಿತಿಯನ್ನು ಸಭೆಯಲ್ಲಿಯೇ ನೀಡಿದರು.
- ಹೆಚ್.ಎ.ಎಲ್ 2ನೇ ಹಂತಹ ರೆಸಿಡೆಂಟ್ ವೆಲ್ಫೇರ್ ಅಸೋಸಿಯೇಶನ್‌ನ ಶ್ರೀ.ನಾಯ್ಡುರವರು ದೂರನ್ನು ತಿಳಿಸುತ್ತಾ, ವಾರ್ಡ್ ವ್ಯಾಪ್ತಿಯಲ್ಲಿನ ನಕ್ಷೆಗೆ ವ್ಯತಿರಿಕ್ತವಾಗಿರುವ ಹಾಗೂ ಕಾನೂನು ಬಾಹಿರವಾಗಿ ನಿರ್ಮಾಣವಾಗುತ್ತಿರುವ ಕಟ್ಟಡಗಳ ಪಟ್ಟಿಯನ್ನು ನೀಡಲು ಕೋರಿರುತ್ತಾರೆ. ಇದಕ್ಕೆ ಒಂದು ತಿಂಗಳೊಳಗೆ ಸರ್ವೇ ಮಾಡಿ ಮಾಹಿತಿ ಒದಗಿಸುವಂತೆ ಮಾನ್ಯ ಅಧ್ಯಕ್ಷರು ತಿಳಿಸಿರುತ್ತಾರೆ.
- ಶ್ರೀ.ಬಾಬುಕುಮಾರ್‌ರವರು ಮಾತನಾಡುತ್ತಾ, ವಾರ್ಡ್ 80ರ ವ್ಯಾಪ್ತಿಯ 1) ಆಸ್ತಿ ಸಂಖ್ಯೆ : 197/4, ಬ್ಲೂ ವೈನ್ಸ್ ಬೇಸ್‌ಮೆಂಟ್ ಶಾಪ್, ಡಬಲ್ ರಸ್ತೆ, ಬೆಂಗಳೂರು, 2) 74/1, ಹಟ್ಟಿಂಗ್ ಕಾಲೊನಿ, ವಾರ್ಡ್ ನಂ. ಹೊಯ್ಸಳನಗರ, ಬೆಂಗಳೂರು ಸ್ವತ್ತುಗಳಲ್ಲಿ ನಿರ್ಮಾಣವಾಗುತ್ತಿರುವ ಕಟ್ಟಡಗಳು ನಕ್ಷೆಗೆ ವ್ಯತಿರಿಕ್ತವಾಗಿ ಹಾಗೂ ಅನಧೀಕೃತವಾಗಿ ನಿರ್ಮಾಣವಾಗುತ್ತಿದ್ದು, ಕ್ರಮ ಕೈಗೊಳ್ಳಲು ಕೋರಿರುತ್ತಾರೆ. ಇದಕ್ಕೆ ಸಹಾಯಕ ಅಭಿಯಂತರರು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.
- ಹೊಸ ಬಿನ್ನಮಂಗಲದ ನಿವಾಸಿಗಳು ಹೊಸದಾಗಿ ಕಮ್ಯುನಿಟಿ ಶೌಚಾಲಯ ನಿರ್ಮಿಸಲು, ಸಿಸಿ ಕ್ಯಾಮೆರಾ ಅಳವಡಿಸಲು, ಜಿಮ್ ಕಟ್ಟಡ ನಿರ್ಮಿಸಲು, ಸರ್ಕಲ್ ಬಳಿ ಹೈಮಾಸ್ಕ್ ಲೈಟ್ ಅಳವಡಿಸಲು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು, ಕಸದ ನಿರ್ವಹಣೆಯನ್ನು ಸಮರ್ಪಕವಾಗಿ ಕೈಗೊಳ್ಳುವಂತೆ ಕೋರಿರುತ್ತಾರೆ. ಈ ಸಂಬಂಧ ಅನುದಾನದ ಲಭ್ಯತೆಯ ಬಗ್ಗೆ ಪರಿಶಿಲಿಸಲಾಗುವುದು ಎಂದು ತಿಳಿಸಲಾಯಿತು.
- ಮರ್ಫಿಟೌನ್ ಮಾರ್ಕೇಟ್ ಎದುರಿನ ಪಾರ್ಕ್‌ನ ಸ್ವಚ್ಛತೆಯನ್ನು ಕೈಗೊಳ್ಳಲು ಮರ್ಫಿಟೌನ್ ನಿವಾಸಿಗಳು ಕೋರಿರುತ್ತಾರೆ. ಈ ಬಗ್ಗೆ ಕ್ರಮವಹಿಸುವಂತೆ ಅಧ್ಯಕ್ಷರು, ಸಹಾಯಕ ಅಭಿಯಂತರರಿಗೆ ತಿಳಿಸಿದರು.

- ಮರ್ಫಿಟೌನ್ ನಿವಾಸಿಗಳು ಮಾತನಾಡಿ, ನಾಲಾ ರಸ್ತೆಯಲ್ಲಿ ಡೆಬ್ರಿಸ್ ತೆರವುಗೊಳಿಸಲು ಹಾಗೂ 4ನೇ ಸ್ಕ್ವೇರ್ ಮತ್ತು 5ನೇ ಸ್ಕ್ವೇರ್‌ನಲ್ಲಿ ಡೆಬ್ರಿಸ್ ತೆರವುಗೊಳಿಸಲು ಕೋರಿದರು. ಈ ಬಗ್ಗೆ ಕ್ರಮವಹಿಸುವಂತೆ ಅಧ್ಯಕ್ಷರು, ಸಹಾಯಕ ಅಭಿಯಂತರರಿಗೆ ತಿಳಿಸಿದರು.
- ಲಕ್ಷ್ಮೀಪುರದ ನಿವಾಸಿಗಳು ಮಾತನಾಡಿ, ಲಕ್ಷ್ಮೀಪುರದ ಪಕ್ಕದಲ್ಲಿರುವ ರಾಜಾ ಕಾಲುವೆಯ ಗೋಡೆಯನ್ನು ಎತ್ತರಿಸಲು ಕೋರಿದರು. ಈ ಬಗ್ಗೆ ಪರಿಶೀಲಿಸುವಂತೆ ಮಳೆನೀರುಗಾಲುವೆಯ ಅಧಿಕಾರಿಗಳಿಗೆ ತಿಳಿಸಲಾಗುವುದು ಎಂದು ಮಾನ್ಯ ಅಧ್ಯಕ್ಷರು ಹೇಳಿದರು.
- ಮರ್ಫಿಟೌನ್ ಅನಂತ್‌ನಾಯರ್ ರಸ್ತೆಯಲ್ಲಿರುವ ಮೀನಿನ ಮಾರಾಟ ಅಂಗಡಿಯನ್ನು ಬಂದ್ ಮಾಡಿಸುವಂತೆ ನಿವಾಸಿಗಳು ಕೋರಿದರು. ಈ ಬಗ್ಗೆ ಪರಿಶೀಲಿಸಿ ಕ್ರಮವಹಿಸುವುದಾಗಿ ಆರೋಗ್ಯ ವೈದ್ಯಾಧಿಕಾರಿಗಳು ತಿಳಿಸಿದರು.
- ಸ್ನೇಹಾ ನಂದಿಹಾಳ್‌ರವರು ಮಾತನಾಡಿ, ವಾರ್ಡ್‌ನಲ್ಲಿರುವ 25 ಪಬ್‌ಗಳಲ್ಲಿ 6 ರೂಫ್‌ಟಾಪ್‌ಗಳಿದ್ದು, ಇದರ ಅನುಮತಿಯ ಬಗೆಗಿನ ವಿವರಗಳನ್ನು ನೀಡಲು ಕೋರಿದ್ದು, ಆರೋಗ್ಯ ವೈದ್ಯಾಧಿಕಾರಿಗಳು, ಮುಂದಿನ ಸಭೆಗೆ ವಿವರಗಳನ್ನು ಒದಗಿಸುವುದಾಗಿ ತಿಳಿಸಿದರು.
- ಸ್ನೇಹಾ ನಂದಿಹಾಳ್‌ರವರು ಡಿಫೆನ್ಸ್ ಕಾಲೊನಿ ಆಟದ ಮೈದಾನದ ಮಾಲೀಕತ್ವದ ಬಗ್ಗೆ ಬಿಡಿಎರವರನ್ನು ಕೋರಿದರು. ಇದಕ್ಕೆ ದಾಖಲೆಗಳನ್ನು ಒದಗಿಸುವುದಾಗಿ ಸಭೆಯಲ್ಲಿ ಹಾಜರಿದ್ದ ಬಿಡಿಎ ಅಧಿಕಾರಿಗಳು ತಿಳಿಸಿದರು.
- ಸ್ನೇಹಾ ನಂದಿಹಾಳ್‌ರವರು ಮಾತನಾಡಿ, ಬಿಡಬ್ಲ್ಯೂಎಸ್‌ಎಸ್‌ಬಿ(ಯುಎಫ್‌ಡಬ್ಲ್ಯೂ) ವತಿಯಿಮದ ವಾರ್ಡಿನ ಹಲವಾರು ರಸ್ತೆಗಳಲ್ಲಿ ಕುಡಿಯುವ ನೀರಿನ ಪೈಪ್‌ಗಳನ್ನು ಬದಲಾಯಿಸಲಾಗಿದ್ದು, 15ನೇ ಕ್ರಾಸ್, 7ನೇ ಮೇನ್ ಇಂದಿರಾನಗರ 1ನೇ ಹಂತ ಮತ್ತು ಬಿಎಂಟಿಸಿ ಕ್ವಾಟ್ರಸ್ ಹತ್ತಿರ ಮತ್ತು ಹಲವು ಕಡೆಗಳಲ್ಲಿ ವಾಟರ್ ಲೀಕೇಜ್ ಉಂಟಾಗುತ್ತಿರುತ್ತದೆ. ಇದನ್ನು ಸರಿಪಡಿಸಲು ಕೋರಿದರು. ಈ ಬಗ್ಗೆ ಕ್ರಮವಹಿಸುವುದಾಗಿ ಬಿಡಬ್ಲ್ಯೂಎಸ್‌ಎಸ್‌ಬಿ ಅಧಿಕಾರಿಗಳು ತಿಳಿಸಿದರು.
- ಸ್ನೇಹಾ ನಂದಿಹಾಳ್‌ರವರು ಮಾತನಾಡುತ್ತಾ, ವಾರ್ಡಿನಲ್ಲಿ ವಸತಿ ಪ್ರದೇಶದಲ್ಲಿ ಕಾನೂನು ಬಾಹಿರವಾಗಿ ವಾಣಿಜ್ಯ ಚಟುವಟಿಕೆಗಳನ್ನು ನಡೆಸುತ್ತಿರುವ ಬಗ್ಗೆ ಸರ್ವೇ ನಡೆಸಿ ವರದಿ ನೀಡಲು ಕೋರಿದ ಮೇರೆಗೆ, ಒಂದು ತಿಂಗಳೊಳಗೆ ಸರ್ವೇ ನಡೆಸಿ ವರದಿ ನೀಡಲಾಗುವುದು ಎಂದು ಆರೋಗ್ಯ ವೈದ್ಯಾಧಿಕಾರಿಗಳು ತಿಳಿಸಿದರು.
- ವಾರ್ಡಿನಲ್ಲಿ ಹಲವು ಕಡೆಗಳಲ್ಲಿ ಅಂದರೆ, ರಸ್ತೆ, ಪಾರ್ಕ್ ಪಕ್ಕ, ಮುಂತಾದ ಕಡೆಗಳಲ್ಲಿ ಡೆಬ್ರಿಸ್ ಇದ್ದು, ಅದನ್ನು ತೆರವುಗೊಳಿಸಲು ಹಾಗೂ ವಾರ್ಡಿನ ಎಲ್ಲಾ ರಸ್ತೆಗಳ ಚರಂಡಿಗಳಲ್ಲಿನ ಹೂಳು ತೆಗೆಯಲು ಕೋರಿದರು.
- ಡಿಫೆನ್ಸ್ ಕಾಲೊನಿ ನಿವಾಸಿಗಳು ಮಾತನಾಡಿ, 2ನೆ ಮೇನ್ ಮತ್ತು 3ನೇ ಮೇನ್ ಬಳಿಯ ಪಾರ್ಕ್ ಹತ್ತಿರ ರಸ್ತೆ ಬದಿ ಚರಂಡಿಯು ಕುಸಿದಿದ್ದು, ಅದನ್ನು ಸರಿಪಡಿಸಲು ಕೋರಿದರು. ಈ ಬಗ್ಗೆ ಅಧ್ಯಕ್ಷರು ಮಾತನಾಡಿ ಒಂದು ವಾರದೊಳಗೆ ಸದರಿ ವಿಷಯದ ಬಗ್ಗೆ ಕ್ರಮವಹಿಸಲು ಸಹಾಯಕ ಅಭಿಯಂತರರಿಗೆ ತಿಳಿಸಿದರು.
- ಡಿಫೆನ್ಸ್ ಕಾಲೊನಿಯಲ್ಲಿನ ಪಾರ್ಕಿನೊಳಗೆ ಕೆಲವು ರಿಪೇರಿ ಕೆಲಸಗಳನ್ನು ಸ್ಥಳೀಯ ನಾಗರೀಕರು ತಮ್ಮ ಸ್ವಂತ ಹಣದಲ್ಲಿ ಕೈಗೊಳ್ಳಲು ಸಭೆಯಲ್ಲಿ ಅನುಮತಿ ನೀಡಲು ತೀರ್ಮಾನಿಸಲಾಯಿತು.

- ವಾರ್ಡಿನ ಪ್ರಮುಖ ರಸ್ತೆಗಳಾದ ಸಿ.ಎಂ.ಹೆಚ್ ರಸ್ತೆಯ ಹಲವು ಕಡೆ ಲೈಟ್‌ಗಳನ್ನು ಹೊಸದಾಗಿ ಅಳವಡಿಸಲು ಹಾಗೂ 5ನೇ ಮುಖ್ಯರಸ್ತೆಯ 5ನೇ ಕ್ರಾಸ್‌ನ ಮನೆ ಸಂ-845 ಬಳಿ ವಿದ್ಯುತ್ ಕಂಬ ಅಳವಡಿಸಲು ಕೋರಿದರು. ಈ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತರಲಾಯಿತು.
- ವಾರ್ಡಿನ ಎಲ್ಲಾ ರಸ್ತೆಗಳಲ್ಲಿ ಹೊಸದಾಗಿ ನಾಮಫಲಕಗಳನ್ನು ಅಳವಡಿಸಲು ಎಲ್ಲಾ ಸದಸ್ಯರು ಕೋರಿರುತ್ತಾರೆ. ಈ ಬಗ್ಗೆ ಅನುದಾನದ ಲಭ್ಯತೆಯನ್ನು ಪರಿಶೀಲಿಸಿ, ಅನುದಾನ ಲಭ್ಯವಿದ್ದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿ ಕ್ರಮವಹಿಸಲಾಗುವುದು ಎಂದು ತಿಳಿಸಲಾಯಿತು.
- ವಾರ್ಡಿನಲ್ಲಿರುವ ಎಲ್ಲಾ ಪಾರ್ಕ್‌ಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸದಸ್ಯರುಗಳು ಕೋರಿದರು. ಈ ಬಗ್ಗೆ ಅನುದಾನದ ಲಭ್ಯತೆಯನ್ನು ಪರಿಶೀಲಿಸಿ, ಅನುದಾನ ಲಭ್ಯವಿದ್ದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿ ಕ್ರಮವಹಿಸಲಾಗುವುದು ಎಂದು ತಿಳಿಸಲಾಯಿತು.
- ತಾಮರೈಕಣ್ಣನ್ ರಸ್ತೆಯ ಚರಂಡಿಯಲ್ಲಿ ನೀರು ಸರಾಗವಾಗಿ ಹರಿಯದೆ ತೊಂದರೆಯಾಗುತ್ತಿರುವ ಕಾರಣ ಕಲ್ವರ್ಟ್ ಅನ್ನು ಮಾಡಲು ಕುಮಾರ್‌ರವರು ಕೋರಿದರು. ಈ ಬಗ್ಗೆ ಪರಿಶೀಲಿಸಿ ಕ್ರಮವಹಿಸಲಾಗುವದು ಎಂದು ಸಹಾಯಕ ಅಭಿಯಂತರರು ತಿಳಿಸಿದರು.
- ವಾರ್ಡಿನಲ್ಲಿರುವ ಒಂಟಿ ಮನೆ ಫಲಾನುಭವಿಗಳ ವಿವರ ಹಾಗೂ ಬಿಲ್ ಪಾವತಿಯಾಗದೇ ಇರುವ ಬಗ್ಗೆ ಪ್ರಸ್ತಾಪಿಸಲಾಯಿತು, ಈ ಸಂಬಂಧ ನಿರ್ದಿಷ್ಟವಾಗಿ ವಿವರ ಸಲ್ಲಿಸಿದರೆ ಪರಿಶೀಲಿಸಿ ಕ್ರಮ ವಹಿಸಲಾಗುವುದು ಎಂದು ತಿಳಿಸಲಾಯಿತು.
- ಹೆಚ್-ಕಾಲೋನಿಯಲ್ಲಿ ರಸ್ತೆ ಮತ್ತು ರಾಜಕಾಲುವೆಯಲ್ಲು ಒತ್ತುವರಿ ಮಾಡಿಕೊಂಡು ಕಟ್ಟಡ ನಿರ್ಮಿಸಲಾಗುತ್ತಿರುವುದರ ಬಗ್ಗೆ ಪರಿಶೀಲಿಸಿ 15 ದಿನಗಳೊಳಗಾಗಿ ಕ್ರಮ ವಹಿಸುವುದಾಗಿ ಸಹಾಯಕ ಅಭಿಯಂತರರು ಸಭೆಗೆ ತಿಳಿಸಿದರು.
- ಮುಂದಿನ ಸಭೆಯಲ್ಲಿ ಜಲಮಂಡಳಿ, ಬೆಸ್ಕಾಂ, ಘನ ತ್ಯಾಜ್ಯ ನಿರ್ವಹಣೆಯ ಮೇಸ್ತ್ರಿಗಳು ಕಡ್ಡಾಯವಾಗಿ ಹಾಜರಿರಬೇಕೆಂದು ತಿಳಿಸಲಾಯಿತು.

ಮೇಲ್ಕಂಡಂತೆ ತಿಳಿಸಲಾಗಿರುವ ಕುಂದುಕೊರತೆಗಳ ಬಗ್ಗೆ ಸಂಬಂಧಪಟ್ಟ ಆಯಾ ಇಲಾಖೆಯ ಅಧಿಕಾರಿಗಳಿಗೆ ಕ್ರಮವಹಿಸಲು ಹಾಗೂ ಸಮಿತಿಯ ಸದಸ್ಯರು ಕೋರಿರುವ ವಿವರಗಳನ್ನು ಮುಂದಿನ ವಾರ್ಡ್ ಸಮಿತಿಯ ಸಭೆಗೆ ಒದಗಿಸುವಂತೆ ಸೂಚಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ವಾರ್ಡ್ ಸಮಿತಿ-80

ಅಧ್ಯಕ್ಷರು
ವಾರ್ಡ್ ಸಮಿತಿ, ವಾರ್ಡ್ 80
ಹಾಗೂ ನೋಡಲ್ ಅಧಿಕಾರಿಗಳು,
ವಾರ್ಡ್ 80